ಆ) ಮೂರುಕಟ್ಟೆಯಲ್ಲಿ ಕೊಬ್ಬರಿಗೆ ಬೇಡಿಕೆ ಇಲ್ಲದಿರುವುದು,

ಇ) ಮೂರುಕಟ್ಟೆಗೆ ಒಣಕೊಬ್ಬರಿಯ ಆವಕ ಹೆಚ್ಚಾ ಗಿರುವುದು,ಹಿ
ಮೂರುಕಟ್ಟೆಗೆ ಬಂದ ಹಾಗೂ ಮಾರಾಟವಾದ ಕೊಬ್ಬರಿ ಲಕ್ಷ ಕ್ವಿಂಟಾಲ್‌ಗಳಲ್ಲಿ.

	ವರ್ಷ		
	೧೯೮೭–೮೮	೧೯೮೮–೮೯	೧೯೮೯–೯೦ ಮೇ ವರೆಗೆ
ಬಂದಿರುವುದು	೨.೦೭	೧.೭೮	೨.೨೯
ಮಾರಾಟ	೧.೯೬	೧.೭೭	೨.೨೩

ಈ) ಏಪ್ರಿಲ್ ರೂ. ೨೮೦೦–೩೦೦೦ ೨೧೨೫–೩೦೨೬
೧೫೦೦–೧೮೫೦
ಮೇ ರೂ. ೧೮೦೦–೨೮೦೦ ೧೭೬೫–೨೮೫೦
೧೪೮೦–೧೮೧೦

ಉ) ಕೇಂದ್ರ ಸರ್ಕಾರ ಸರದಿ ವರ್ಷದಲ್ಲಿ ಸರಾಸರಿ ಒಳ್ಳೆ ಗುಣಮಟ್ಟದ ಮಿಲ್ಲಿಂಗ್ ಕೊಬ್ಬರಿಗೆ ಕ್ವಿಂಟಾಲ್‌ಗೆ ೧೬೦೦ರೂ. ಹಾಗೂ ಒಂದು ದರ್ಜೆ ಕಡಿಮೆ ಕೊಬ್ಬರಿಗೆ ೧೫೫೦ರೂ. ಬೆಂಬಲ ಬೆಲೆ ನಿಗದಿಪಡಿಸಿದ್ದು, ಈ ಬೆಂಬಲ ಬೆಲೆಯಲ್ಲಿ ಸರ್ಕಾರದ ಸಂಸ್ಥೆಗಳಾದ ನಾಫೆಡ್ ಮತ್ತು ರಾಜ್ಯ ಮೂರುಕಟ್ಟೆ ಮಹಾ ಮಂಡಲಗಳು ಕೊಬ್ಬರಿಯನ್ನು ಕೊಳ್ಳುವಂತೆ ಕ್ರಮ ಕೈಗೊಳ್ಳಲಾಗಿದೆ.

ವಿಧಾನ ಸೌಧದ ಎದುರು ಸ್ಥಾಪಿಸಲು ಉದ್ದೇಶಿಸಿರುವ ಪ್ರತಿಮೆ ಬಗ್ಗೆ

೬೦೫. ಶ್ರೀ ರಾಮಲಿಂಗರೆಡ್ಡಿ (ಜಯನಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಧಾನಸೌಧದ ಪೂರ್ವದ ಬಲಭಾಗದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪ್ರತಿಮೆ ಯಾರದು;

ಆ) ಅದಕ್ಕೆ ಇದುವರೆವಿಗೂ ತಗುಲಿದ ವೆಚ್ಚವೆಷ್ಟು ? (ಖರ್ಚಿನ ಪೂರ್ಣ ವಿವರಗಳನ್ನು ನೀಡುವುದು)

ಇ) ಪ್ರತಿಮೆಯನ್ನು ಅನಾವರಣಗೊಳಿಸಲು ಆಗುತ್ತಿರುವ ವಿಳಂಬಕ್ಕೆ ಕಾರಣವೇನು ?

ಈ) ಈ ಪ್ರತಿಮೆಯ ಅನಾವರಣವನ್ನು ಯಾವಾಗ ಕೈಗೊಳ್ಳಲಾಗುವುದು?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ವಿಧಾನ ಸೌಧದ ಮುಂಭಾಗದ ದಕ್ಷಿಣ ಪೂರ್ವ ಭಾಗದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪ್ರತಿಮೆಯು ಮಾಜಿ ಪ್ರಧಾನಿಯಾದ ಪಂಡಿತ್ ಜವಾಹರಲಾಲ್ ನೆಹರೂರವರದು.

ಆ) ಇದುವರೆವಿಗೂ ಇದಕ್ಕೆ ತಗಲಿರುವ ವೆಚ್ಚ ರೂ. ೬,೧೦,೫೬೪-೦೦. ಇದರ ವಿವರಗಳು ಈ ಕೆಳಕಂಡಂತೆ ಇವೆ.

(೧) ಆಧಾರ ಸ್ತಂಭ ಮತ್ತು ವೇದಿಕೆಯ ವೆಚ್ಚ ರೂ.	೨,೨೪,೬೬೪-೦೦
(೨) ಕಂಚಿನ ಪ್ರತಿಮೆಯನ್ನು ತಯಾರಿಸುವುದಕ್ಕೆ ರೂ.	೩,೭೫,೦೦೦-೦೦
(೩) ಗೋವಾದಿಂದ ಬೆಂಗಳೂರಿಗೆ ಸಾಗಿಸಲು ತಗುಲಿರುವ ವೆಚ್ಚ ರೂ.	೧೦,೯೦೦-೦೦
ಒಟ್ಟು	೬,೧೦ ೫೬೪-೦೦

ಇ) ಪ್ರತಿಮೆಯು ಅನಾವರಣಗೊಳಿಸಲು ಸಿದ್ಧವಾಗಿದೆ.

ಈ) ಈ ಪ್ರತಿಮೆಯ ಅನಾವರಣವನ್ನು ಶೀಘ್ರದಲ್ಲಿಯೇ ಕೈಗೊಳ್ಳಲಾಗುವುದು.